S C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## sc ನಂಬರ್‌ಃ 78/2019

ಚಾ.ಸಾ.–4 ಪ್ರಾ.ಸಾ.–17

| | |
|---|---|
| **ಸಾಕ್ಷಿದಾರರ ಹೆಸರು** | **ಶ್ರೀಮತಿ ನಿಂಗರಾಜಮ್ಮ** |
| **ಗಂಡನ ಹೆಸರು** | **ಸಿದ್ದೇಗೌಡ** |
| **ವಯಸ್ಸು** | **52 ವರ್ಷಗಳು** |
| **ಉದ್ಯೋಗ** | **ಗೃಹಿಣಿ** |
| **ವಾಸ** | **ನೆಲಮಾಕನಹಳ್ಳಿ** |

**ದಿನಾಂಕಃ 23.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1, 2 ಮತ್ತು 3 ರವರ ಪರಿಚಯ ಇದೆ. ಚಾಸಾ– 5, 6, 7, 9, 10, 11, 12, 14 ರವರ ಪರಿಚಯವಿದೆ. ಅವರೆಲ್ಲರು ನಮ್ಮ ಗ್ರಾಮದವರು ಮತ್ತು ಅಕ್ಕಪಕ್ಕದ ಊರಿನವರು.

2) ಈ ದಿನ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused in the dock) ಅವರು ನಮ್ಮ ಗ್ರಾಮದವರು. ಚಾಸಾ– 1 ರವರ ತವರೂರು ಕೆಂಚನದೊಡ್ಡಿ ಗ್ರಾಮ. 1 ನೇ ಆರೋಪಿ ಚಾಸಾ– 1 ರವರ ಗಂಡ. ಅವರ ಮದುವೆ ಸುಮಾರು 15 ವರ್ಷಗಳ ಹಿಂದೆ ಆಗಿರುತ್ತದೆ. ಅವರ ಮದುವೆಯ ಮಾತುಕತೆ ಮಣಿಗೆರೆ ಗ್ರಾಮದ ಚಾಸಾ– 12 ರವರ ಮನೆಯಲ್ಲಿ ಆಗಿರುತ್ತದೆ. ಸದರಿ ಮಾತುಕತೆಗೆ ನನ್ನ ಗಂಡ ಸಿದ್ದೇಗೌಡ ಹೋಗಿದ್ದರು. ಮದುವೆ ಸಮಯದಲ್ಲಿ ಹುಡುಗನಿಗೆ ವರದಕ್ಷಿಣೆಯಾಗಿ ಚಿನ್ನದ ಚೈನು, ಉಂಗುರ ಮತ್ತು ದ್ವಿಚಕ್ರ ವಾಹನ ಖರೀದಿಸಲು ಹಣ ಹಾಗೂ ಹುಡುಗಿಗೆ ಒಡವೆಗಳನ್ನು

ಕೊಡಬೇಕೆಂದು ಬೇಡಿಕೆ ಇಟ್ಟಿದ್ದರು ಎಂದು ನನ್ನ ಗಂಡ ನನಗೆ ತಿಳಿಸಿದರು. ಕೆ.ಎಂ.ದೊಡ್ಡಿಯ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಮದುವೆ ಸಮಾರಂಭ ಆಯಿತು. ಮದುವೆಯ ನಂತರ ಆರೋಪಿತರ ಮನೆಯಲ್ಲಿ ಚಾಸಾ- 1 ರವರು ವಾಸವಿದ್ದು ಆಕೆಗೆ ಒಂದು ಗಂಡು ಮಗು ಜನಿಸಿರುತ್ತದೆ. ಮದುವೆಯಾದ 2-3 ವರ್ಷ ಗಂಡ ಹೆಂಡತಿಯರು ಚೆನ್ನಾಗಿದ್ದು ನಂತರ ವರದಕ್ಷಿಣೆ ಸಾಕಾಗಿಲ್ಲ ಇನ್ನೂ ಚಿನ್ನ ಬೇಕು ಎಂದು ಹೇಳಿ ಆರೋಪಿತರು ಚಾಸಾ- 1 ರವರ ಜೊತೆ ಗಲಾಟೆ ಮಾಡಿ ತವರು ಮನೆಗೆ ಕಳುಹಿಸಿದರು. 2 ತಿಂಗಳು ಅವರು ತವರು ಮನೆಯಲ್ಲಿದ್ದ ನಂತರ ಆಕೆಯ ತಂದೆ ತಾಯಿ ಆಕೆಯನ್ನು ಆರೋಪಿತರ ಮನೆಗೆ ಕರೆದುಕೊಂಡು ಬಂದರು. ಮಧ್ಯಾಹ್ನ 12.00 ಗಂಟೆ ಸಮಯ ಆರೋಪಿತರ ಮನೆಯಲ್ಲಿ ಗಲಾಟೆ ಶಬ್ದ ಕೇಳಿಸಿತು. ಆ ಸಮಯ ನಾನು ಆರೋಪಿತರ ಪಕ್ಕದ ಮನೆಯಾದ ಚಾಸಾ-5 ರವರ ಮನೆಯಲ್ಲಿದ್ದೆ. ಆ ಸಮಯ ಚಾಸಾ- 5 ಮತ್ತು ಚಾಸಾ- 1 ರವರ ತಂದೆ ತಾಯಿ ಹಾಗೂ ನಾನು ಇದ್ದೆವು. ಆ ಸಮಯ ನಾವು ಆರೋಪಿತರ ಮನೆಯ ಹತ್ತಿರ ಹೋದಾಗ ಚಾಸಾ- 1 ಬಾಯಿ ಬಡಿದುಕೊಂಡು ಆರೋಪಿತರ ಮನೆಯಿಂದ ಹೊರಗೆ ಬಂದರು. ಅವಳ ಮೈಮೇಲೆ ಸೀಮೆಎಣ್ಣೆ ಸುರಿದಿತ್ತು. ಅವಳನ್ನು ಕೇಳಿದಾಗ ಆರೋಪಿತರು ಅವಳ ಮೇಲೆ ಹಲ್ಲೆ ಮಾಡಿ ಸೀಮೆಎಣ್ಣೆ ಸುರಿದರು ಎಂದು ಹೇಳಿದಳು. ನಂತರ ನಾನು ಮತ್ತು ಆಕೆಯ ತಂದೆ ತಾಯಿ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಸ್ಪತ್ರೆಗೆ ಅಡ್ಮಿಟ್ ಆಗಿ ಚಿಕಿತ್ಸೆ ಪಡೆದುಕೊಂಡರು. ಈ ಬಗ್ಗೆ ದೂರು ಕೊಟ್ಟಿರುವ ಬಗ್ಗೆ ಗೊತ್ತಾಗಿರುತ್ತದೆ. ಪೊಲೀಸರ ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಂ ವಿ ಆರ್ ವಕೀಲರಿಂದಃ</u>**

3) ನನ್ನ ಗಂಡ ಮನೆಯಲ್ಲಿ ಇದ್ದಾರೆ. ಈ ದಿನ ನ್ಯಾಯಾಲಯಕ್ಕೆ ಚಾಸಾ- **3** ರವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ . ಚಾಸಾ- **3** ರವರು ನನ್ನ ಗಂಡನ ತಂಗಿ. ಚಾಸಾ- **1** ನನ್ನ ಗಂಡನ ತಂಗಿಯ ಮಗಳು. ನನ್ನ ಮನೆಗೂ ಆರೋಪಿತರ ಮನೆಗೂ ಮಧ್ಯೆ ಸುಮಾರು ಅರ್ಧ ಕಿ.ಮೀ. ದೂರ ಇದೆ. ಚಾಸಾ- **5** ವಸಂತಮ್ಮ ನನ್ನ ವಾರಗಿತ್ತಿ. ವಸಂತಮ್ಮನ ಗಂಡ ಹಾಗೂ ನನ್ನ ಗಂಡ ಅಣ್ಣತಮ್ಮಂದಿರಾಗಿದ್ದು ನಾವು ಮನೆ ಭಾಗ ಮಾಡಿಕೊಂಡು ಅಕ್ಕಪಕ್ಕದಲ್ಲಿ ವಾಸವಿದ್ದೇವೆ.

ಆರೋಪಿತರ ಮನೆಯ ಪಕ್ಕದ ಮನೆಯಲ್ಲಿ ವಸಂತಮ್ಮ ವಾಸವಿರುವುದಿಲ್ಲ ಎಂದರೆ ಸರಿ. ಮದುವೆ ಮಾತುಕತೆಗೆ ನಾನು ಭಾಗವಹಿಸಿರುವುದಿಲ್ಲ. ಆರೋಪಿತರು ಜಮೀನುಗಳು ಹೊಂದಿದ್ದು ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದರೆ ಸರಿ . ಚಾಸಾ– 3 ರವರಿಗೆ ಇಬ್ಬರು ಹೆಣ್ಣುಮಕ್ಕಳು. ಅವರಿಗೆ ಆರ್ಥಿಕವಾಗಿ ವರಮಾನ ಇಲ್ಲ ಎಂದರೆ ಸರಿಯಲ್ಲ. ನೆಲಮಾಕನಹಳ್ಳಿಗೆ ಬಾಲಾಜಿ ಕಲ್ಯಾಣ ಮಂಟಪ ಹತ್ತಿರ ಆಗಿರುತ್ತದೆ. ಸದರಿ ಮದುವೆಯನ್ನು ಆರೋಪಿತರೇ ಖರ್ಚು ವೆಚ್ಚ ಮಾಡಿ ನಡೆಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಂದೆ ಮದುವೆಯ ಒಂದು ವರ್ಷದ ನಂತರ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದಿರುತ್ತಾರೆ. ಅವರು ಎದ್ದು ತಿರುಗಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿ . ಆಕೆಯ ಮಾವನ ಸೇವೆ ಮಾಡುವುದರಿಂದ ತಪ್ಪಿಸಿಕೊಳ್ಳಲು ಚಾಸಾ– 1 ರವರು ಮದುವೆಯಾದ 2 ವರ್ಷಗಳ ಒಳಗೆ ಗಂಡನ ಮನೆಯಿಂದ ತವರು ಮನೆಗೆ ಹೋಗಿ ಸೇರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಪಿರ್ಯಾದಿದಾರರಿಗೆ ಸಹಾಯ ಮಾಡುವ ಸಲುವಾಗಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ಗಲಾಟೆ ನಡೆದಿದೆ ಎನ್ನುವ ದಿವಸ ನಾನಾಗಲೀ, ನನ್ನ ಗಂಡನಾಗಲೀ, ಊರಿನ ಹಿರಿಯರಾಗಲೀ ಆರೋಪಿತರ ಮನೆಗೆ ಚಾಸಾ– 1 ರವರ ಜೊತೆ ಹೋಗಿರುವುದಿಲ್ಲ. ಗಲಾಟೆ ನಡೆದಿದೆ ಎನ್ನುವ ದಿವಸ ಚಾಸಾ– 1 ರವರ ಜೊತೆಗೆ ಅವಳ ಗಂಡನ ಮನೆಗೆ ಹೋಗಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿತರು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವರದಕ್ಷಿಣೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅವರೇ ವಧುದಕ್ಷಿಣೆ ಕೊಟ್ಟು ಚಾಸಾ– 1 ರವರನ್ನು ಖರ್ಚು ವೆಚ್ಚಗಳನ್ನು ವಹಿಸಿ 1 ನೇ ಆರೋಪಿ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ– 1,2,3 ರವರ ಜೊತೆ ಯಾವುದೇ ರೀತಿಯ ವರದಕ್ಷಿಣೆ ಬೇಡಿಕೆ ಮದುವೆಯ ನಂತರವೂ ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. ಮಾವನ ಸೇವೆಯನ್ನು ಮಾಡುವುದರಿಂದ ತಪ್ಪಿಸಿಕೊಳ್ಳಲು ಚಾಸಾ– 1 ರವರು ತನ್ನ ತವರು ಮನೆಗೆ ಹೋಗಿರುತ್ತಾಳೇ ಹೊರತು ಆರೋಪಿತರು ಯಾವುದೇ ರೀತಿಯ ವರದಕ್ಷಿಣೆ ಕಿರುಕುಳವನ್ನು ಚಾಸಾ– 1 ರವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ ಎನ್ನುವ ದಿವಸ ಚಾಸಾ– 1,2,3 ರವರು ನಮ್ಮ

ಊರಿಗೆ ಬಂದಿರುವುದೇ ಇಲ್ಲ, ಆರೋಪಿತರ ಮನೆಗೆ ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಚಾಸಾ– 1 ರವರ ಮಧ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ, ಚಾಸಾ– 1 ರವರ ಮೈಮೇಲೆ ಯಾರೂ ಸೀಮೆಎಣ್ಣೆ ಸುರಿದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಚಾಸಾ– 1 ರವರು ನನ್ನ ಗಂಡನ ಹತ್ತಿರದ ಸಂಬಂಧಿಯಾದ ಕಾರಣ ಸಾಧ್ಯವಾದರೆ ಅವರಿಗೆ ಅನುಕೂಲವಾಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ– 1 ರವರು ಆಸ್ತಿಯ ಭಾಗವನ್ನು ಕೇಳಿಕೊಂಡು ಆರೋಪಿತರ ವಿರುದ್ಧ ಮಳವಳ್ಳಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿರುತ್ತಾರೆ ಎಂದರೆ ಸರಿ . ಘಟನೆ ನಡೆದಿದೆ ಎನ್ನುವ ಪೂರ್ವದಲ್ಲಿ ಜೀವನಾಂಶವನ್ನು ಕೋರಿ ಚಾಸಾ– 1 ರವರು 1 ನೇ ಆರೋಪಿಯ ವಿರುದ್ಧ ಮಳವಳ್ಳಿಯ ನ್ಯಾಯಾಲಯದಲ್ಲಿ ಅರ್ಜಿ ಹಾಕಿದ್ದಾರೆ ಎಂದರೆ ಸರಿ .ಆ್ರೋಪಿತರು ಯಾವುದೇ ರೀತಿಯ ಆರೋಪ ಎಸಗಿರುವುದಿಲ್ಲವೆಂದು ನನಗೆ ಗೊತ್ತಿದ್ದರೂ ಕೂಡ ಚಾಸಾ– 1 ರವರು ಅವರ ಮೇಲೆ ದಾಖಲಿಸಿರುವ ಪ್ರಕರಣಗಳಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ